‘ಪ್ರತಿಯೊಬ್ಬ ವ್ಯಕ್ತಿಯೂ ಕೂಡ ಏನನ್ನೋ ಕಳೆದುಕೊಳ್ಳುತ್ತಾನೆ. ಮತ್ತೆ ಮಹತ್ತಾದ ಮತ್ತೇನನ್ನೋ ಪಡೆಯಲು ಮುನ್ನುಗ್ಗುತ್ತಾನೆ. ನಿರಾಶೆಯನ್ನೇ ಒಂದು ವೇದಿಕೆ ಮಾಡಿಕೊಂಡು ಬದುಕೋರೂ ಇದ್ದಾರೆ, ಅದನ್ನ ಆಯುಧವನ್ನಾಗಿಸಿಕೊಂಡು ಸಾಧಿಸುವವರೂ ಇದ್ದಾರೆ... ಅಥವಾ ಅದಕ್ಕೆ ಬಲಿ ಕೊಟ್ಟುಕೊಂಡವರೂ ಇದ್ದಾರೆ. ನನಗೆ ಅಂಥ ಮನೋಭಾವ ಕಂಡರೆ ಇಷ್ಟ ಆಗುವುದಿಲ್ಲ.’ ನಿರ್ಧಾರಯುತವಾಗಿ ಹೇಳಿದೆ. ‘ಇವತ್ತು ದೊಡ್ಡ ದೊಡ್ಡವರು ಅನ್ನಿಸಿಕೊಂಡವರೆಲ್ಲ ಅವರವರ ನಿರಾಸೆಗಳನ್ನು ಒಂದು ಧನಾತ್ಮಕ ಅಂಶವಾಗಿಯೇ ಸ್ವೀಕರಿಸಿದ್ದಾರೆ.’ ಅವಳ ಕಡೆ ನೋಡಿ ಕೇಳಿದೆ...’ ನೀನೂ ಅಂತಹವಳು ಆಗಬೇಕು ಅಂತ ನನ್ನಾಸೆ. ಆಗ್ರೀಯ ಅಲ್ವಾ?’

ಅವಳ ಕಣ್ಣಲ್ಲಿ ಬೆಳಕು. ‘ನನಗೆ ಏನು ಮಾಡಲಿ ಅಂತ ತಿಳೀತಿಲ್ಲ... ತೀರಾ ಒಂಟಿ ಅನ್ನಿಸಿಬಿಡುತ್ತೆ. ಯಾರೇ ಇದ್ದರೂ ಅವರು ನನ್ನವರಲ್ಲ ಅನ್ನಿಸುತ್ತೆ. ಹೇಗೆ ಇದನ್ನ ತಿದ್ದಿಕೊಳ್ಳಲಿ?’ ಮುಗ್ಧತೆ ಇತ್ತು ಅವಳ ಪ್ರಶ್ನೆಯಲ್ಲಿ.

‘ಬಹಳ ಸುಲಭವಾದ ಉಪಾಯ ಇದೆ’ ನಾನು ಹಗುರವಾಗಿ ನಕ್ಕೆ. ‘ನಿನಗೆ ಕೆಲಸವಿಲ್ಲದೆ ಬೋರ್ ಆಗ್ತಿದೆ. ಸರಳ ಉಪಾಯ ಅಂದರೆ, ನಿನ್ನ ಗಂಡನ ಜೊತೆಯಲ್ಲಿ ತೋಟಕ್ಕೆ ಹೋಗು. ಕೆಲಸ ಕಲಿ. ಬೇಕಾದರೆ ಅಗ್ರಿಕಲ್ಚರ್ ಡಿಪ್ಲೊಮ ಮಾಡಿಕೊ. ...ನಿನ್ನ ತೋಟಕ್ಕೆ ಮತ್ತಷ್ಟು ಉಪಯೋಗ ಆಗುತ್ತೆ. ...ಅಲ್ಲಿ ಕೆಲಸ ಮಾಡುವವರ ಮಕ್ಕಳಿಗೆ ಎ ಬಿ ಸಿ ಡಿ... ಹೇಳಿಕೊಡು. ಅವರಿಗೂ ಕೂಡ ಕೃಷಿಯ ತಂತ್ರಗಳನ್ನ ಕಲಿಸುತ್ತಾ ಹೋಗು. ...ನಿನಗೆ ಒಂಟಿತನ ಕಾಡುವುದೇ ಇಲ್ಲ... ನಾವ್ಯಾರೂ ನಿನ್ನ ನೆನಪಿಗೂ ಬರಲ್ಲ... ನಾವು ಹೇಗೆ ಬೆಂಗಳೂರಲ್ಲಿ ಕಳೆದು ಹೋಗುತ್ತೇವೋ... ಹಾಗೇ ನೀನೂ ನಿನ್ನ ತೋಟದ ಮರಗಳಲ್ಲಿ ಕಳೆದು ಹೋಗುತ್ತೀಯ...’ ನಗುತ್ತಾ ಹೇಳಿದೆ. ಅವಳ ಭವಿಷ್ಯದ ತೋಟದಲ್ಲಿ ಅವಳನ್ನು ಕರೆದೊಯ್ದೆ.

ಅವಳಲ್ಲಿ ಒಂದು ನಗುವಿನ ಸೆಳಕು... ಏನೋ ತಿಳಿ ಆದಂತಹ ಭಾವ. ಪ್ರಶಾಂತನ ಬೈಕು ಡುಗು ಡುಗು ಸದ್ದು ಮಾಡುತ್ತ ಬಂದಿತು.

‘ಮುಗೀತೇನಪ್ಪ ನಿಮ್ಮ ಮಾತು ಕಥೆ... ಅಥವಾ ಮತ್ತೊಂದು ರೌಂಡ್ ಹೋಗಿ ಬರಬೇಕ?’ ಅಂದ.

ಪ್ರಶ್ನಾ... ಅವನನ್ನು ನೋಡಿ ಜೋರಾಗಿ ನಗತೊಡಗಿದಳು. ಅವನ ಷರ್ಟಿನ ಬಟನ್ ಮೇಲೆ ಕೆಳಗೆ ಹಾಕಿಕೊಂಡಿದ್ದ... ಅವನಿಗೆ ಅತ್ಯಂತ ಆಶ್ಚರ್ಯ ಆಗಿತ್ತು ಅವಳ ನಗು ಕಂಡು.

‘ಬಟನ್ ನೋಡು ಹೇಗೆ ಹಾಕ್ಕೊಂಡಿದ್ದೀಯ?’ ನಗುತ್ತಲೇ ಕೇಳಿದಳು. ಅವನು ಕಣ್ಣು ಕಿರಿದಾಗಿಸಿ ಅವಳನ್ನು ನೋಡಿದ. ನನ್ನನ್ನು ಕೂಡ. ಹಾಗೆಯೇ ಬಟನ್ ಸರಿಯಾಗಿ ಹಾಕಿಕೊಂಡು ಕುಳಿತ.

‘ಇಷ್ಟು ಜೋರಾಗಿ ನಗೋಕೆ ಬರುತ್ತಲ್ಲ ನಿನಗೆ ಅದು ಇವತ್ತೇ ಗೊತ್ತಾಗಿದ್ದು ನನಗೆ... ಅಂಥದ್ದೇನು ಆಗಿದ್ದು ಈಗ...’ ಹುಸಿ ಮುನಿಸು ತೋರಿಸಿದ.

‘ನಿನಗೆ ಮುನಿಸಿಕೊಳ್ಳೋಕೂ ಬರುತ್ತೆ ಅಂತ ಇವತ್ತೇ ನನಗೆ ಗೊತ್ತಾಗಿದ್ದು...’ ಅವಳು ನಗುತ್ತಲೇ ಅವನ ಮುಂಗೂದಲು ಹಿಡಿದು ಅಲುಗಾಡಿಸಿದಳು.

‘ಸರಿಯಪ್ಪ ಆಯ್ತು... ನಾನು ಬಂದ ಕೆಲಸ... ಇನ್ನು ಹೊರಡ್ತೀನಿ... ನೀವು ಗಂಡ ಹೆಂಡತಿ ನಿಧಾನವಾಗಿ ಬನ್ನಿ...’ ನಾನು ಎದ್ದು ಮರಳು ಕೊಡವಿಕೊಂಡೆ.

‘ಕೂತ್ಕೊಳ್ಳೋ... ಸಾಕು...’ ಅವನು ಕೈಹಿಡಿದು ಎಳೆದ. ‘ಹೋಗ್ತಾನಂತೆ... ಇಲ್ಲಿದ್ದು